ಶ್ರೀ ಷಫಿ ಅಹಮದ್:- ಸನ್ಮಾನ್ಯ ಸಚಿವರ ಉತ್ತರದಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ೧೩,೬೨೩ ಹುದ್ದೆಖಾಲಿ ಇವೆ, ಹೈಸ್ಕೂಲಿನಲ್ಲಿ ೧,೪೦೦ ಖಾಲಿ ಇವೆ, ಎಂದು ಉತ್ತರಿಸಿದ್ದಾರೆ ಇವನ್ನು ಯಾವಾಗ ತುಂಬುತ್ತೀರಿ? ಕಳೆದ ಒಂದು ವರ್ಷದಿಂದ ಹುದ್ದೆ ಭರ್ತಿ ಮಾಡಿಲ್ಲ ಅದರಲ್ಲೂ ತುಮಕೂರು ಜಿಲ್ಲೆಯಲ್ಲಿ ೧೨೯೫ ಪೋಸ್ಟಿಂಗ್ಸ್ ಪೆಂಡಿಂಗ್ ಇವೆ. ಅದೇರೀತಿ ಉರ್ದುಶಾಲೆಗಳಲ್ಲಿ ಕನ್ನಡ ಮೇಸ್ಟ್ರುಗಳನ್ನು ಕೊಟ್ಟಿಲ್ಲ ಅದರಲ್ಲೂ ಏಜ್-ಕಂ-ಮೆರಿಟ್ ಸಿಷ್ಟಮ್ ಅಳವಡಿಸಿಕೊಳ್ಳಲಾಗುವುದೆಂದು ತಾವು ಹಿಂದೆ ಭರವಸೆ ಕೊಟ್ಟಿದ್ದಿರಿ ಅದನ್ನು ಸರಿಪಡಿಸುತ್ತೀರಾ?

ಡಾ. ಹೆಗ್ಗಪ್ಪ ಡಿ. ಲಮಾಣಿ:- ಸಭಾಪತಿಗಳೇ ನಾನು ಈಗಾಗಲೇ ೧೩,೬೨೩ ಪೋಸ್ಟ್ ಖಾಲಿ ಏನಿದೆ ಅಷ್ಟಕ್ಕೆ ಈಗಾಗಲೇ ೫೪೫೫ ಪೋಸ್ಟ್ ತುಂಬಿದ್ದೇವೆ ಇನ್ನು ೧೩೫೬ ಹುದ್ದೆಗಳನ್ನು ವೇಟಿಂಗ್ ಲಿಸ್ಟ್‌ನಲ್ಲಿ ಏನು ಇಡಲಾಗಿತ್ತು ಅವನ್ನು ತುಂಬಲು ವ್ಯವಸ್ಥೆ ಮಾಡಲಾಗಿದೆ. ಇನ್ನು ಏಜ್ ಅಂಡ್ ಮೆರಿಟ್ ಮೇಲೆ ೬೪೧೨ ಪೋಸ್ಟ್‌ಗಳನ್ನು ೧೦೦ ದಿನದ ಕಾರ್ಯಕ್ರಮದಲ್ಲಿ ಇನ್ನು ಸ್ವಲ್ಪ ದಿವಸದಲ್ಲಿ ತೆಗೆದುಕೊಳ್ಳುತ್ತಿದ್ದೇವೆ. ಇನ್ನುಳಿದ ಕೆಲವು ಹುದ್ದೆಗಳನ್ನು ರೆಗ್ಯುಲರ್ ಹುದ್ದೆಯಲಿ ್ಲ ತೆಗೆದುಕೊಳ್ಳುತ್ತಿದ್ದೇವೆ. ಹೈಸ್ಕೂಲಿನಲ್ಲಿ ೧೪೦೫ ಪೋಸ್ಟ್ ಖಾಲಿ ಇದೆ. ಅವನ್ನು ಕೂಡ ಸಿ ಅಂಡ್ ಆರ್ ಪ್ರಕಾರ ತುಂಬಲು ವ್ಯವಸ್ಥೆ ಮಾಡಿದ್ದೇವೆ. ಅದರಲ್ಲಿ ಈಗಾಗಲೇ ೨೨೫ ಪ್ರಾಥಮಿಕ ಶಾಲೆಗಳಲ್ಲಿ ಎಲಿಜಿಬಲ್ ಟೀಚರ್ಸ್ ಬಿ.ಎ.ಬಿಎಡ್ ಮಾಡಿಕೊಂಡು ಇದ್ದಾರಲ್ಲ ಅವರಲ್ಲಿ ಸೀನಿಯಾರಿಟಿ ಪ್ರಕಾರ ಹೈಸ್ಕೂಲ್‌ಗೆ ತೆಗೆದುಕೊಳ್ಳುವ ವ್ಯವಸ್ಥೆ ಮಾಡಿದ್ದೇವೆ. ಇನ್ನು ಉರ್ದು ಶಾಲೆಗಳಲ್ಲಿ ೧೬೩೦ ಕನ್ನಡ ಟೀಚರ್ಸ್ ಪೋಸ್ಟ್ ಖಾಲಿ ಇವೆ. ಅಷ್ಟಕ್ಕೆ ೬೪೧೨ ಪೋಸ್ಟ್ ತುಂಬುವಾಗ ಈ ಪ್ರೈಮರಿ ಉರ್ದು ಶಾಲೆಗಳಿಗೂ ನೇಮಕ ಮಾಡುತ್ತೇವೆ, ಇನ್ನು ಒಂದೆರಡು ತಿಂಗಳಲ್ಲೇ ತುಂಬಿಕೊಡುತ್ತೇವೆ.

ಅಧ್ಯಕ್ಷರು:- ಪ್ರಶ್ನೋತ್ತರ ಮುಗಿಯಿತು.

ಶ್ರೀ ಪಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಯೇ ಬಂದಿಲ್ಲ.

ಅಧ್ಯಕ್ಷರು:- ಅದರ ಬಗ್ಗೆ ಹೇಳಿದ್ದೇನೆಲ್ಲಾ, ತಾವು ಸದನದಲ್ಲಿ ಇರಲಿಲ್ಲ.

ಶ್ರೀ ಪಾಟಾಳ್ ನಾಗರಾಜ್:- ಮುಂದಿನ ವಾರ ಅದನ್ನು ಕಳುಹಿಸುತ್ತೇವೆ ಎಂದು ಹೇಳುತ್ತಿದ್ದೀರಿ, ಇದೇನು ಅಂಥ ಬಹಳ ಕಷ್ಟವಾದಂಥ ಪ್ರಶ್ನೆ ಏನು ಅಲ್ಲ.

ಅಧ್ಯಕ್ಷರು:- ಮಾನ್ಯ ಮಂತ್ರಿಗಳು ಕಾಲಾವಕಾಶವನ್ನು ಕೇಳಿಕೊಂಡಿದ್ದಾರೆ. ದಯಮಾಡಿ ಕುಳಿತುಕೊಳ್ಳಿ. ಕಾಲಾವಕಾಶ ಕೇಳಿದ್ದಾರೆ. ಕೊಡೋಣ. ತಡೆಹಿಡಿದಿದ್ದೇವೆ. ಮತ್ತೆ ತೆಗೆದುಕೊಳ್ಳೋಣ.

ಚುಕ್ಕೆ ಗುರುತಿಲ್ಲದ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳು:

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು):- ಮಾನ್ಯ ಅಧ್ಯಕ್ಷರೇ, ದಿನಾಂಕ ೧೭-೨-೯೩ರ ಲಿಖಿತ ಮೂಲಕ ಉತ್ತರಿಸುವ ಎರಡನೇ ಪಟ್ಟಿಯಲ್ಲಿರುವ ೪೪ ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ, ೧೩೫, ೨೪೭, ೪೩೮, ೬೦೧, ೫೪೧, ೬೩೮ ಮತ್ತು ೬೨೭ ಪ್ರಶ್ನೆಗಳನ್ನು ಹೊರತುಪಡಿಸಿ ಉಳಿದ ೩೮ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ವಿಷಯ:- ಕಪ್ಪು ಹಲಗೆಯ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೪:- (೯೨)
ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ)